**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 3283/2015**

| | | |
|---|---|---|
| ಹೆಸರು | : | ಮಲ್ಲಿಕಾರ್ಜುನ್ |
| ತಂದೆಯ ಹೆಸರು | : | ನಾರಾಯಣ್ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಎ ಎಸ್ ಐ, ದೊಡ್ಡಬಳ್ಳಾಪುರ ಟೌನ್ ಪೋಲಿಸ್ ಠಾಣೆ |
| ವಾಸ | : | ದೊಡ್ಡಬಳ್ಳಾಪುರ |

**PW-3, CW-5**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 05-11-2025.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನಾನು 2010 ನೇ ಸಾಲಿನಿಂದ 2016 ರವರೆಗೆ ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.24-02-2015 ರಂದು ನಾನು ರಾತ್ರಿ ಪಹಳೆಯ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮದ್ಯ ರಾತ್ರಿ 11.30 ಗಂಟೆಯ ಸಮಯದಲ್ಲಿ ಚಾಸಾ-1 ರವರು ಕರ್ತವ್ಯದಲ್ಲಿದ್ದ ನನ್ನನ್ನು ಸೋಲೂರು ಗೇಟ್ ಬಳಿ ಬರಮಾಡಿಕೊಂಡು ನನಗೆ ವಿಚಾರ ತಿಳಿಸಿ ಮಾಯಸಂದ್ರ ಗ್ರಾಮದ ಬಳಿ ಯಾವುದೇ ಪರವಾನಿಗೆ ಇಲ್ಲದೇ ಲಾರಿಗಳಲ್ಲಿ ಅಕ್ರಮವಾಗಿ ಮರಳು ತುಂಬಿಕೊಂಡು ಕಳ್ಳತನದಿಂದ ಸಾಗಾಣಿಕೆ ಮಾಡುತ್ತಿರುತ್ತಾರೆ ಎಂದು ಬಂದ ಮಾಹಿತಿ ಮೇರೆಗೆ ದಾಳಿ ನಡೆಸಬೇಕು ಎಂದು ತಿಳಿಸಿ ಪಂಚರಾದ ಚಾಸಾ-2 ರಿಂದ 4 ರವರನ್ನು ಬರಮಾಡಿಕೊಂಡು ಅವರಿಗೆ ವಿಚಾರ ತಿಳಿಸಿ, ಚಾಸಾ-1 ರವರ ಜೊತೆ ಸರ್ಕಾರಿ ವಾಹನ ಸಂಖ್ಯೆ ಕೆಎ-04-ಜಿ-1164 ರ ಜೀಪಿನಲ್ಲಿ ಪಂಚರ ಜೊತೆ ಸೋಲೂರು ಗೇಟ್ ನಿಂದ ಮಾಯಸಂದ್ರ ಕಡೆಗೆ ಹೋಗುತ್ತಿದ್ದಾಗ ಮಾಯಸಂದ್ರ ಚಿಕ್ಕಗೊಲ್ಲಹಳ್ಳಿ ರಸ್ತೆ ಸ್ಮಶಾನದ ಬಳಿ ರಾತ್ರಿ 12.15 ಗಂಟೆಯ ಸಮಯದಲ್ಲಿ ಒಂದು ಲಾರಿ ಬರುತ್ತಿದ್ದು, ಅದನ್ನು ನಿಲ್ಲಿಸಿದಾಗ ಅದರ ಚಾಲಕ ನಮ್ಮನ್ನು ನೋಡಿ ಓಡಲು ಪ್ರಯತ್ನ ಪಟ್ಟಿದ್ದು, ನಾವು ಅವನನ್ನು ಹಿಡಿದು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ತನ್ನ ಹೆಸರು ಅನಿಲ್ ಬಿನ್ ಕೃಷ್ಣಮೂರ್ತಿ ಕಾರಹಳ್ಳಿ ಎಂದು ತಿಳಿಸಿದ್ದು, ಸದರಿ ಲಾರಿಯಲ್ಲಿದ್ದ ಗ್ರಾವೆಲ್ ಮರಳಿನ ಬಗ್ಗೆ ಕೇಳಲಾಗಿ, ಸದರಿ ಗ್ರಾವೇಲ್ ಮರಳನ್ನು 1 ನೇ ಆರೋಪಿ ರವರು ಮಾಯಸಂದ್ರ ಗ್ರಾಮದ ಬಂಡೆಯ ಮೇಲಿದ್ದ ಲಾಕ್ ನಿಂದ ತುಂಬಿಸಿರುವುದಾಗಿ ಸದರಿ ಗ್ರಾವೇಲ್ ಮರಳನ್ನು ಸಾಗಿಸಲು ಯಾವುದೇ ಪರವಾನಿಗೆ ಇಲ್ಲ ಎಂದು ಕಳ್ಳತನದಿಂದ ಸಾಗಾಣಿಕೆ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ. ಸದರಿ ಲಾರಿಯ ಸಂಖ್ಯೆ

ನೋಡಲಾಗಿ ಪಿಎನ್ -64-ಬಿ -7434 ಟಿಪ್ಪರ್ ಲಾರಿ ಆಗಿರುತ್ತದೆ. ನಂತರ ಪಂಚರ ಸಮಕ್ಷಮ 12.15 ರಿಂದ 1.15 ಗಂಟೆಯವರೆಗೆ ನಿಪಿ-1 ರಂತೆ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಚಾಸಾ-1 ರವರು ಜರುಗಿಸಿರುತ್ತಾರೆ. ನಿಪಿ-1 ಕ್ಕೆ ನಾನು ಸಹಿ ಮಾಡಿದ್ದು, ಸಾಕ್ಷಿಯು ನಿಪಿ-1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಂತರ ಲಾರಿ ಚಾಲಕ 2 ನೇ ಆರೋಪಿಯನ್ನು ಮತ್ತು ಲಾರಿಯನ್ನು ಚಾಲಕನಿಂದ ಚಾಲನೆ ಮಾಡಿಸಿಕೊಂಡು ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ. ಈ ಸಂಬಂದ ಚಾಸಾ-1 ರವರು ಚಾಸಾ-5 ರವರಿಗೆ ಲಾರಿ ಮಾಲೀಕರ ಮೇಲೆ ಕ್ರಮ ಜರುಗಿಸುವಂತೆ ಜ್ಞಾಪನ ನೀಡಿರುತ್ತಾರೆ. 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಸಂಬಂದ ನಾನು ಚಾಸಾ-5 ರವರಿಗೆ ನನ್ನ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಎ ಎ ಆರೋಪಿತರ ಪರ ವಕೀಲರಿಂದ**

ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ನಾನು ನೀಡಿದ ಹೇಳಿಕೆಯನ್ನು ಓದಿ ತಿಳಿದುಕೊಂಡಿರುತ್ತೇನೆ. ಘಟನೆಯು ದಿ. 24-02-2015 ರಂದು ಮದ್ಯರಾತ್ರಿ 12.15 ಗಂಟೆಗೆ ನಡೆದಿರುತ್ತದೆ. ನನ್ನನ್ನು ಆ ದಿನ ರಾತ್ರಿ ಪಹಳೆಯ ಕರ್ತವ್ಯಕ್ಕೆ ನೇಮಕ ಮಾಡಿದ್ದ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಚಾಸಾ-1 ರವರು ನನ್ನನ್ನು ದಿ.24-02-2015 ರಂದು ಮದ್ಯರಾತ್ರಿ 12.15 ಗಂಟೆಗೆ ಬರಮಾಡಿಕೊಂಡರು ಎಂದರೆ ಸುಳ್ಳು. ಮಹಜರಿಗೆ ನನ್ನನ್ನು ಹೊರತುಪಡಿಸಿ ಚಾಸಾ-2 ರಿಂದ 4 ರವರು ಸಹಿ ಮಾಡಿರುತ್ತಾರೆ. ನನ್ನ ಹೇಳಿಕೆಯಲ್ಲಿ ನಿಪಿ-1 ಅನ್ನು 2.30 ರಿಂದ 3.30 ಗಂಟೆಯವರೆಗೆ ಬರೆಯಲಾಗಿದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸೋಲೂರು ಗೇಟ್ ನಿಂದ ಘಟನೆ ಆಯಿತು ಎಂದು ಹೇಳುವ ಸ್ಥಳಕ್ಕೆ ಸುಮಾರು 2 ಕಿ ಮೀ ಅಂತರ ಇದೆ. ಘಟನಾ ಸ್ಥಳದಿಂದ ವಿಶ್ವನಾಥಪುರ ಪೋಲೀಸ್ ಠಾಣೆಗೆ ಸುಮಾರು 4 ಕಿ ಮೀ ಅಂತರ ಇದೆ. ಲಾರಿಯನ್ನು ಮರಳು ತುಂಬಿಸುವ ಜಾಗದಲ್ಲಿ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿ. ರಸ್ತೆಯಲ್ಲಿ ಹೋಗುವ ಲಾರಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದರೆ ಸರಿ. ಮರಳನ್ನು ತುಂಬಿಸುವ ಜಾಗಕ್ಕೆ ನಾವು ಹೋಗಿರುವುದಿಲ್ಲ ಎಂದರೆ ಸರಿ. ಘಟನಾ ದಿನ ನಾನು ಸ್ಥಳದಲ್ಲಿ ಇರದೇ ಇದ್ದರೂ ಸಹ ಮೇಲಾದಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕು ಬಂದಿ ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ಮೇಲಾದಿಕಾರಿಗಳ ಮಾತು ಕೇಳಿಕೊಂಡು ಠಾಣೆಯ ಅಂಕಿಸಂಖ್ಯೆಗೊಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,
ದೇವನಹಳ್ಳಿ.